☎ Ph : 2768 3377

# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.in

ಸಂ. ಬಿಐಎಎಪಿಎ/ಟಿಪಿ1/ಸಿಸಿ/02/2017-18/1378 ದಿನಾಂಕ: 26 OCT 2017

## "ಪ್ರಾರಂಭಿಕ ಪ್ರಮಾಣ ಪತ್ರ"

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15(1) ರನ್ವಯ)

(ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ನಿಯಮಗಳು 1965 ರ ನಿಯಮ 30 ನಮೂನೆ 3 ರನ್ವಯ)

ವಿಷಯ: ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ನವರತ್ನಅಗ್ರಹಾರ ಗ್ರಾಮದ ಸರ್ವೆ ನಂ. 67/287 ರಲ್ಲಿ 13ಎಕರೆ 04ಗುಂಟೆ ಹಾಗೂ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಹೆಗ್ಗನಹಳ್ಳಿ ಗ್ರಾಮದ ಸರ್ವೆ ನಂ. 58/1 ರ ಪೈಕಿ (1ಎ-03ಗು), 59/2 (59) ರ ಪೈಕಿ (3ಎ-10ಗು), 59/3 (59) ರಲ್ಲಿ (21ಗು), 59/4 (59ಗು) (0-21ಗು), 59/5 (59) ರಲ್ಲಿ (0-21ಗು), 59/6 (59) ರಲ್ಲಿ (0-21ಗು), 59/7 (59) ರಲ್ಲಿ (1ಎ-02ಗು), 59/8 (59) ರಲ್ಲಿ (0-30ಗು), 72/2 ರಲ್ಲಿ (2ಎ-20ಗು), 72/3 ರಲ್ಲಿ (2ಎ-20ಗು) ಒಟ್ಟು 13ಎಕರೆ 09ಗುಂಟೆ ಮತ್ತು ನಾಗಮಂಗಲ ಗ್ರಾಮದ ಸರ್ವೆ ನಂ. 93 ರ ಪೈಕಿ (10ಗು), 94 (51/51) ರಲ್ಲಿ (0-20ಗು), 95 (51/52) ರಲ್ಲಿ (0-15ಗು), 96 (51/53) ರಲ್ಲಿ (0-20ಗು), 97 (51/54) ರಲ್ಲಿ (0-15ಗು), 99 (51/44) ರ ಪೈಕಿ (0-28ಗು), 100 (51/43) ರಲ್ಲಿ (0-33ಗು), 102 (51/41) ರ ಪೈಕಿ (10ಗು), 103 (51/42) ರಲ್ಲಿ (1ಎ), 105 (51/38) ರ ಪೈಕಿ (05ಗು), 106 (51/39) ರಲ್ಲಿ (1ಎ-08ಗು), 109 (51/34) ರ ಪೈಕಿ (0-35ಗು), 112 (51/33) ರ ಪೈಕಿ (1ಎ-08ಗು), 116 (51/30) ರ (1ಎ-04ಗು), 122 (51/24) ರ ಪೈಕಿ (0-21ಗು), 125 (51/21) ರ ಪೈಕಿ (11ಗು), 128 (51/16) ರ ಪೈಕಿ (0-06ಗು), 131 (51/15) ರ ಪೈಕಿ (0-02ಗು) ಒಟ್ಟು 10ಎಕರೆ 11ಗುಂಟೆ *ಒಟ್ಟಾರೆ 36ಎಕರೆ 24ಗುಂಟೆ ಅಥವಾ 148112.00 ಚ.ಮೀ* ವಿಸ್ತೀರ್ಣದ ಪ್ರದೇಶದಲ್ಲಿ ಅನುಮೋದಿಸಲಾಗಿರುವ ಅಭಿವೃದ್ಧಿ ನಕ್ಷೆಯಲ್ಲಿನ ***ಭಾಗಶಃ ವಸತಿ ಪ್ರದೇಶದಲ್ಲಿ ಟವರ್ ಸಿ2, ಸಿ3, ಸಿ4, ಡಿ4 ಮತ್ತು ಡಿ5 ರ ಕಟ್ಟಡಗಳನ್ನು*** ಕಟ್ಟಲು ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ಸಲ್ಲಿಸಿರುವ ಮನವಿಯ ಬಗ್ಗೆ.

ಉಲ್ಲೇಖ: 1) ಅರ್ಜಿದಾರರ ಸಲ್ಲಿಸಿರುವ ಅರ್ಜಿ ಸಂಖ್ಯೆ 4302 ದಿನಾಂಕ: 07-04-2017 ಮತ್ತು ಮನವಿ ಪತ್ರ ದಿನಾಂಕ: 05-07-2017

2) ಈ ಪ್ರಾಧಿಕಾರದ ಸಭೆಯ ದಿನಾಂಕ: ದಿನಾಂಕ: 12-07-2017 ರಂದು ನಡೆದ ಪ್ರಾಧಿಕಾರದ 119 ನೇ ಸಭೆಯ ವಿಷಯ ಸಂಖ್ಯೆ 119 [6 (ಬಿ) (1)] ರಲ್ಲಿ ಕೈಗೊಂಡ ನಿರ್ಣಯ

| | |
|---|---|
| 3) ಈ ಪ್ರಾಧಿಕಾರದ ಸಮ ಸಂಖ್ಯೆ ಪತ್ರ ದಿನಾಂಕ: | **12-10-2017** |
| 4) ಪ್ರಾಧಿಕಾರಕ್ಕೆ ಶುಲ್ಕವನ್ನು ಪಾವತಿಸಿರುವ ವಿವರ | ಅರ್ಜಿದಾರರು ದಿನಾಂಕ: **25-10-2017** ಮನವಿ ಪತ್ರದೊಂದಿಗೆ ಸಲ್ಲಿಸಿರುವ ಹೆಚ್.ಡಿ.ಎಫ್.ಸಿ ಬ್ಯಾಂಕ್, ಕಸ್ತೂರಿ ಬಾ ಗಾಂಧಿ ಮಾರ್ಗ್ ಶಾಖೆ, ಬೆಂಗಳೂರು ಇಲ್ಲಿನ ದಿನಾಂಕ: **17-10-2017** ರ ಡಿ.ಡಿ. ಸಂಖ್ಯೆ **169255** ರಲ್ಲಿ ರೂ. **39,40,000-00** (ಮೂವತ್ತೊಂಬತ್ತು ಲಕ್ಷದ ನಲವತ್ತು ಸಾವಿರ ರೂಪಾಯಿಗಳು ಮಾತ್ರ) ಮತ್ತು ಡಿ.ಡಿ. ಸಂಖ್ಯೆ **169254** ರಲ್ಲಿ ರೂ. **52,08,000-00** (ಐವತ್ತೆರಡು ಲಕ್ಷದ ಎಂಟು ಸಾವಿರ ರೂಪಾಯಿಗಳು ಮಾತ್ರ) ಗಳಂತೆ ಒಟ್ಟು **91,48,000/-** ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. |
| 5) ಹೆಚ್ಚುವರಿ ವಿದ್ಯುತ್ ವಾಹಕ ತಂತಿ ಸಾಲಿನ ಪಂಕ್ತೀಕರಣದ ಬದಲಾವಣೆ ಕುರಿತು ಮುಚ್ಚಳಿಕೆ ಪತ್ರವನ್ನು ಹಾಗೂ ಕಟ್ಟಡ ನಕ್ಷೆಯ ನೀಲಿ ಪ್ರತಿಗಳನ್ನು ಸಲ್ಲಿಸಿದ ದಿನಾಂಕ | **25-10-2017** ಮತ್ತು **26-10-2017** |

*******

**ಮೆ|| ನಾಮ್ ಎಸ್ಟೇಟ್ಸ್ ಪ್ರೈವೇಟ್ ಲಿಮಿಟೆಡ್** ಇವರು ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ನವರತ್ನಅಗ್ರಹಾರ ಗ್ರಾಮದ ಸರ್ವೆ ನಂ. 67/287 ರಲ್ಲಿ 13ಎಕರೆ 04ಗುಂಟೆ ಹಾಗೂ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಹೆಗ್ಗನಹಳ್ಳಿ ಗ್ರಾಮದ ಸರ್ವೆ ನಂ. 58/1 ರ ಪೈಕಿ (1ಎ-03ಗು), 59/2 (59) ರ ಪೈಕಿ (3ಎ-10ಗು), 59/3 (59) ರಲ್ಲಿ (21ಗು), 59/4 (59ಗು) (0-21ಗು), 59/5 (59) ರಲ್ಲಿ (0-21ಗು), 59/6 (59) ರಲ್ಲಿ (0-21ಗು), 59/7 (59) ರಲ್ಲಿ (1ಎ-02ಗು), 59/8 (59) ರಲ್ಲಿ (0-30ಗು), 72/2 ರಲ್ಲಿ (2ಎ-20ಗು), 72/3 ರಲ್ಲಿ (2ಎ-20ಗು) ಒಟ್ಟು 13ಎಕರೆ 09ಗುಂಟೆ ಮತ್ತು ನಾಗಮಂಗಲ ಗ್ರಾಮದ ಸರ್ವೆ ನಂ. 93 ರ ಪೈಕಿ (10ಗು), 94 (51/51) ರಲ್ಲಿ (0-20ಗು), 95 (51/52) ರಲ್ಲಿ (0-15ಗು), 96 (51/53) ರಲ್ಲಿ (0-20ಗು), 97 (51/54) ರಲ್ಲಿ (0-15ಗು), 99 (51/44) ರ ಪೈಕಿ (0-28ಗು), 100 (51/43) ರಲ್ಲಿ (0-33ಗು), 102 (51/41) ರ ಪೈಕಿ (10ಗು), 103 (51/42) ರಲ್ಲಿ (1ಎ), 105 (51/38) ರ ಪೈಕಿ (05ಗು), 106 (51/39) ರಲ್ಲಿ (1ಎ-08ಗು), 109 (51/34) ರ ಪೈಕಿ (0-35ಗು), 112 (51/33) ರ ಪೈಕಿ (1ಎ-08ಗು), 116 (51/30) ರ (1ಎ-04ಗು), 122 (51/24) ರ ಪೈಕಿ

☎ Ph : 2768 3377

# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ಬಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.
ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.in

(0–21ಗು), 125 (51/21) ರ ಪೈಕಿ (11ಗು), 128 (51/16) ರ ಪೈಕಿ (0–06ಗು), 131 (51/15) ರ ಪೈಕಿ (0–02ಗು) ಒಟ್ಟು 10ಎಕರೆ 11ಗುಂಟೆ *ಒಟ್ಟಾರೆ 36ಎಕರೆ 24ಗುಂಟೆ ಅಥವಾ 148112.00 ಚ.ಮೀ* ವಿಸ್ತೀರ್ಣದ ಪ್ರದೇಶದಲ್ಲಿ ಅನುಮೋದಿಸಲಾಗಿರುವ ಅಭಿವೃದ್ಧಿ ನಕ್ಷೆಯಲ್ಲಿನ ***ಭಾಗಶಃ ವಸತಿ ಪ್ರದೇಶದಲ್ಲಿ ಟವರ್ ಸಿ2, ಸಿ3, ಸಿ4, ಡಿ4 ಮತ್ತು ಡಿ5 ರ ಕಟ್ಟಡಗಳನ್ನು ಕಟ್ಟುವ ಸಲುವಾಗಿ*** ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ನೀಡಲು ಕೋರಿ ಉಲ್ಲೇಖ (1) ರಂತೆ ಅರ್ಜಿ ಸಲ್ಲಿಸಿದ್ದು, ಸಲ್ಲಿಸಿರುವ ಕಟ್ಟಡ ನಕ್ಷೆಯು ವಲಯ ನಿಯಮಾವಳಿಗಳನ್ವಯ ಸೂಕ್ತವಾಗಿರುವ ಕಾರಣ, ಉಲ್ಲೇಖ (2) ರ **ದಿನಾಂಕ: 12–07–2017 ರಂದು ನಡೆದ ಪ್ರಾಧಿಕಾರದ 119 ನೇ ಸಭೆಯ ವಿಷಯ ಸಂಖ್ಯೆ 119 [6 (ಬಿ) (1)]** ರಲ್ಲಿ ಮಂಡಿಸಲಾಗಿದ್ದು, ಸಭೆಯಲ್ಲಿ ಪ್ರಸ್ತಾವನೆಗೆ ಅನುಮೋದನೆ ನೀಡಲು ನಿರ್ಣಯಿಸಲಾಗಿರುತ್ತದೆ.

ಸಭೆಯ ನಿರ್ಣಯದನ್ವಯ ಉಲ್ಲೇಖ (3) ರ ಪ್ರಾಧಿಕಾರದ ಪತ್ರದಲ್ಲಿ ಕಟ್ಟಡ ನಕ್ಷೆ ಅನುಮೋದನೆ ಸಂಬಂಧ ಶುಲ್ಕ ಪಾವತಿಸಲು ಹಾಗೂ ಪ್ರಸ್ತಾವನೆ ಸಂಬಂಧ ಹೆಚ್ಚುವರಿ ವಿದ್ಯುತ್ ವಾಹಕ ತಂತಿ ಸಾಲಿನ ಪಂಕ್ತೀಕರಣದ ಬದಲಾವಣೆ ಕುರಿತು ಬೆಸ್ಕಾಂ/ಕೆಪಿಟಿಸಿಎಲ್ ರವರಿಂದ ದೃಢೀಕರಣ ಪತ್ರವನ್ನು ಪಡೆದು ಸಲ್ಲಿಸದೇ ಇರುವ ಕಾರಣ ಮುಚ್ಚಳಿಕೆ ಪತ್ರವನ್ನು ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸಿರುವ ಕಟ್ಟಡ ನಕ್ಷೆಯ ನೀಲಿ ಪ್ರತಿಗಳನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ. ಅದರಂತೆ, ಉಲ್ಲೇಖ (4) ರಂತೆ ನಿಗಧಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಉಲ್ಲೇಖ (5) ರಂತೆ ಮುಚ್ಚಳಿಕೆ ಪತ್ರ ಮತ್ತು ನ್ಯೂನ್ಯತೆಗಳನ್ನು ಸರಿಪಡಿಸಿರುವ ಕಟ್ಟಡ ನಕ್ಷೆಯ ನೀಲಿ ಪ್ರತಿಗಳನ್ನು ಸಲ್ಲಿಸಿರುತ್ತಾರೆ. ಆದ್ದರಿಂದ, **ಪ್ರಾರಂಭಿಕ ಪ್ರಮಾಣ ಪತ್ರವನ್ನು** ಈ ಕೆಳಗಿನ ನಿಬಂಧನೆಗಳೊಂದಿಗೆ ನೀಡಲಾಗಿದೆ.

**<u>ನಿಬಂಧನೆಗಳು</u>**

1. ಯೋಜಿಸಿರುವ ಕಟ್ಟಡವನ್ನು <u>*"ವಸತಿ"*</u> ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಬೇಕು.
2. ಈ ಪ್ರಾರಂಭಿಕ ಪ್ರಮಾಣ ಪತ್ರವನ್ನು ಎರಡು ವರ್ಷದ ಅವಧಿಗೆ ಅಂದರೆ **<u>ದಿನಾಂಕ: 26–10–2017 ರಿಂದ 25–10–2019 ರವರೆಗೆ</u>** ಮಾತ್ರ ನೀಡಲಾಗಿರುತ್ತದೆ.
3. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಪ್ರಕಾರ ಇದು ಪ್ರಾರಂಭಿಕ ಪ್ರಮಾಣ ಪತ್ರವಾಗಿದ್ದು, ಈ ಪತ್ರದ ಆಧಾರದ ಮೇಲೆ ಅವಶ್ಯಕ ಇತರೆ ಪರವಾನಿಗೆಯನ್ನು ನವರತ್ನಅಗ್ರಹಾರ ಗ್ರಾಮದ ಸರ್ವೆ ನಂಬರುಗಳಲ್ಲಿ ಬರುವ ಕಟ್ಟಡಗಳಿಗೆ ದೊಡ್ಡಜಾಲ ಗ್ರಾಮ ಪಂಚಾಯ್ತಿಯಿಂದ ಹಾಗೂ ಹೆಗ್ಗನಹಳ್ಳಿ ಮತ್ತು ನಾಗಮಂಗಲ ಗ್ರಾಮದ ಸರ್ವೆ ನಂಬರುಗಳಲ್ಲಿ ಬರುವ ಕಟ್ಟಡಗಳಿಗೆ ಜಾಲಿಗೆ ಗ್ರಾಮ ಪಂಚಾಯ್ತಿಯಿಂದ ಪಡೆಯದೇ ಅಭಿವೃದ್ಧಿ ಕಾರ್ಯ ಕೈಗೊಳ್ಳಬಾರದು.

4. ಕಟ್ಟಡ ಕಟ್ಟಲು ಪರವಾನಿಗೆಯನ್ನು ನವರತ್ನಅಗ್ರಹಾರ ಗ್ರಾಮದ ಸರ್ವೆ ನಂಬರುಗಳಲ್ಲಿ ಬರುವ ಕಟ್ಟಡಗಳಿಗೆ ದೊಡ್ಡಜಾಲ ಗ್ರಾಮ ಪಂಚಾಯ್ತಿಯಿಂದ ಹಾಗೂ ಹೆಗ್ಗನಹಳ್ಳಿ ಮತ್ತು ನಾಗಮಂಗಲ ಗ್ರಾಮದ ಸರ್ವೆ ನಂಬರುಗಳಲ್ಲಿ ಬರುವ ಕಟ್ಟಡಗಳಿಗೆ ಜಾಲಿಗೆ ಗ್ರಾಮ ಪಂಚಾಯ್ತಿಯಿಂದ ಪಡೆಯಬೇಕು.

5. ಕಟ್ಟಡವನ್ನು ಹಾಲಿ ಇರುವ ವಲಯ ನಿಯಮಾವಳಿ ಹಾಗೂ ಕಟ್ಟಡದ ವಿಧಿಯ ಪ್ರಕಾರ ಕಟ್ಟಬೇಕು. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಈ ಪ್ರಾರಂಭಿಕ ಪ್ರಮಾಣ ಪತ್ರದ ಮೂಲಕ ಅನುಮೋದಿಸಿರುವ ನಕ್ಷೆಯಂತೆಯೇ ಕೈಗೊಳ್ಳಬೇಕು. ಬೆಳವಣಿಗೆಯಲ್ಲಿನ ಯಾವುದೇ ಬದಲಾವಣೆಯನ್ನು ಈ ಕಛೇರಿಯ ಪೂರ್ವಾನುಮತಿ ಪಡೆಯದೇ ಮಾಡತಕ್ಕದ್ದಲ್ಲ.

6. **"ವಸತಿ"** ಉಪಯೋಗಕ್ಕೆ ಕಟ್ಟಡ ಕಟ್ಟಲು ನಕ್ಷೆಯಲ್ಲಿ ಬಿಟ್ಟಿರುವಂತೆ ನಡುಜಾಗವನ್ನು ಬಿಟ್ಟು ಕಟ್ಟಡ ಕಟ್ಟತಕ್ಕದ್ದು ಮತ್ತು ಹಾಲಿ ರಸ್ತೆಯು ಜಿಲ್ಲಾ ಮುಖ್ಯ ರಸ್ತೆ/ರಾಜ್ಯ/ರಾಷ್ಟ್ರೀಯ ಹೆದ್ದಾರಿ ರಸ್ತೆಯಾಗಿದ್ದಲ್ಲಿ ಹೆದ್ದಾರಿಯ ಮಧ್ಯಭಾಗದಿಂದ ನಿಯಮಾವಳಿಯಂತೆ ಜಾಗವನ್ನು ಬಿಟ್ಟು ಕಟ್ಟತಕ್ಕದ್ದು.

7. ಕಟ್ಟಡದ ಮತ್ತು ಯಾವುದೇ ಅಭಿವೃದ್ಧಿಯ ತಳಪಾಯ, ಅಗ್ನಿಶಾಮಕ ವ್ಯವಸ್ಥೆ ಹಾಗೂ ಇತರ ಭದ್ರತಾ ವ್ಯವಸ್ಥೆಗಳು ಅರ್ಜಿದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಪ್ರಮಾಣ ಪತ್ರ ಬದ್ಧವಲ್ಲ ಹಾಗೂ ಪ್ರಾಧಿಕಾರವು ಜವಾಬ್ದಾರರಾಗುವುದಿಲ್ಲ.

8. ಕಟ್ಟಡ ಭದ್ರತೆಯ ಕುರಿತು ನುರಿತ (Structural Engineer) ತಜ್ಞರಿಂದ Structural Details ಪಡೆದು ಅದರಂತೆ ನಿರ್ವಹಿಸುವುದು ಹಾಗೂ ಅವಶ್ಯಕ ಮುಂಜಾಗ್ರತೆಗಳನ್ನು ಕೈಗೊಳ್ಳತಕ್ಕದ್ದು. ಈ ಕುರಿತು ಪ್ರಾಧಿಕಾರಕ್ಕೆ ಯಾವುದೇ ಜವಾಬ್ದಾರಿ ಇರುವುದಿಲ್ಲ.

9. ಪ್ರಸ್ತಾವನೆ ಸಂಬಂಧ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: AAI/BIA/ATM/NOC/BIAL/SOUTH/B/070114/44789/1170-74, AAI/BIA/ATM/NOC/BIAL/SOUTH/B/070114/44789/1170-74 ದಿನಾಂಕ: 12-09-2014 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

10. ಪ್ರಸ್ತಾವನೆ ಸಂಬಂಧ ಅಗ್ನಿಶಾಮಕ ಇಲಾಖೆ ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: GBC (1) 371/2016 ದಿನಾಂಕ: 17-03-2016 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

11. ಪ್ರಸ್ತಾವನೆ ಸಂಬಂಧ ಬೆಸ್ಕಾಂರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: CEBRAZ/SEO/AEE-2/11-12/11153-58 ದಿನಾಂಕ: 15-12-2011 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

☎ Ph : 2768 3377

**ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ**

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.in

12. ಪ್ರಸ್ತಾವನೆ ಸಂಬಂಧ ಬಿಎಸ್‌ಎನ್‌ಎಲ್‌ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: AGM (TP)/S-6/Vol-3/2014-15/31&32 ದಿನಾಂಕ: 23-09-2014 ಮತ್ತು 15-10-2014 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

13. ಪ್ರಸ್ತಾವನೆ ಸಂಬಂಧ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: PCB/386/CNP/10/H-2077 ದಿನಾಂಕ: 05-03-2014 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

14. ಪ್ರಸ್ತಾವನೆ ಸಂಬಂಧ ಸ್ಟೇಟ್ ಲೆವೆಲ್ ಎನ್‌ವಿರಾನ್‌ಮೆಂಟ್ ಇಂಫಾಕ್ಟ್ ಅಸೆಸ್‌ಮೆಂಟ್ ಅಥಾರಿಟಿ-ಕರ್ನಾಟಕ ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: SEIAA 102 CON 2013 ದಿನಾಂಕ: 30-09-2013 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

15. ವಿಮಾನ ಹಾರಾಟದಿಂದ ಉಂಟಾಗುವ ಶಬ್ದ ಮಾಲಿನ್ಯಕ್ಕೆ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.

16. ಕಾಮಗಾರಿಗಳಿಂದಾಗಿ ಪರಿಸರವು ಮಾಲಿನ್ಯವಾಗದಂತೆ ಎಚ್ಚರಿಕೆ ವಹಿಸತಕ್ಕದ್ದು ಮತ್ತು ಸ್ವಾಭಾವಿಕ ಮಳೆಯ ನೀರು ಇಂಗಿ ಹೋಗಲು ವ್ಯವಸ್ಥೆ (Rain Water harvesting) ಯನ್ನು ಮಾಡತಕ್ಕದ್ದು ಮತ್ತು ಸೌರಶಕ್ತಿ ವ್ಯವಸ್ಥೆಯನ್ನು ಕಟ್ಟಡದಲ್ಲಿ ಒದಗಿಸತಕ್ಕದ್ದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ನಿವೇಶನದ ಮುಂಭಾಗದಲ್ಲಿ ಗಿಡ/ಮರವನ್ನು ಬೆಳೆಸತಕ್ಕದ್ದು.

17. ಅಭಿವೃದ್ಧಿ ನಕ್ಷೆ ಅನುಮೋದನೆ ಸಂಬಂಧ ಸಲ್ಲಿಸಿರುವ ಮುಚ್ಚಳಿಕೆ ಪತ್ರದಂತೆ ಹೆಚ್.ಟಿ.ಲೈನ್ ಅನ್ನು ಸೂಕ್ತವಾಗಿ ಸ್ಥಳಾಂತರಿಸತಕ್ಕದ್ದು.

18. ಈ ಪ್ರಮಾಣ ಪತ್ರ ನೀಡಿರುವ ಮಾತ್ರಕ್ಕೆ ಯಾವುದೇ ಸೌಲಭ್ಯವನ್ನು ಅರ್ಜಿದಾರರಿಗೆ ನೀಡುವ ಹೊಣೆಗಾರಿಕೆ ಪ್ರಾಧಿಕಾರಕ್ಕಿರುವುದಿಲ್ಲ.

19. ಈ ಪ್ರಾರಂಭಿಕ ಪ್ರಮಾಣ ಪತ್ರದೊಡನೆ ಅನುಮೋದಿಸಲ್ಪಟ್ಟಿರುವ ನಕ್ಷೆಯು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.

20. ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳಬಾರದು.

21. ಈ ಪ್ರಾಧಿಕಾರದ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ಸಂಪರ್ಕ ರಸ್ತೆಯ ಬಗ್ಗೆ ಯಾವುದೇ ತಕರಾರು ಬಂದರೂ ಈ ಪ್ರಾಧಿಕಾರವು ಹೊಣೆಯಲ್ಲ ಮತ್ತು ನೀವೇ ಸ್ವಂತ ಜವಾಬ್ದಾರಿಯಿಂದ ಬಗೆಹರಿಸಿಕೊಳ್ಳತಕ್ಕದ್ದು.

22. ಈ ಅನುಮತಿಯನ್ನು ಉಲ್ಲಂಘಿಸಿ ಅಭಿವೃದ್ಧಿಯನ್ನು ಕೈಗೊಂಡರೆ ಅಥವಾ ನೀಡಿರುವ ಮಾಹಿತಿಗಳು ದೋಷಪೂರ್ಣವಾಗಿದ್ದರೆ ಅನುಮತಿಯನ್ನು ಹಿಂತೆಗೆದುಕೊಳ್ಳಲಾಗುವುದಲ್ಲದೇ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು.

23. ಇತರೆ ಇಲಾಖೆಗಳಿಂದ ಅಗತ್ಯವಿರುವ ಅನುಮತಿ/ನಿರಾಕ್ಷೇಪಣಾ ಪತ್ರಗಳನ್ನು ಸಹ ಪಡೆಯತಕ್ಕದ್ದು.

24. ಪ್ರಸ್ತಾಪಿತ ಕಟ್ಟಡದ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಮುನ್ನವೇ ಕಡ್ಡಾಯವಾಗಿ ಕಟ್ಟಡದ ಎತ್ತರದ ಕುರಿತು ಏರ್‌ಫೋರ್ಸ್, ಯಲಹಂಕರವರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯುವ ಷರತ್ತಿಗೊಳಪಟ್ಟಿರುತ್ತದೆ

25. ನೀವು ಸಲ್ಲಿಸಿರುವ ಮಾಹಿತಿ/ದಾಖಲಾತಿಗಳು ಸುಳ್ಳು ಅಥವಾ ಫೋರ್ಜರಿಗಳಾಗಿದ್ದರೆ ಈ ಕಛೇರಿಯಿಂದ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರವು ತಂಪಾನೆ ರದ್ದಾಗುತ್ತದೆ.

26.10.2017

ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ,
ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ.

ಇವರಿಗೆ:
**ಮೆ॥ ಸಾಮ್ ಎಸ್ಟೇಟ್ಸ್ ಪ್ರೈವೇಟ್ ಲಿಮಿಟೆಡ್**
ನಂ. 150, ಎಂಬಾಸ್ಸಿ ಪಾಯಿಂಟ್,
ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು 560 001
} ಕಟ್ಟಡ ನಕ್ಷೆಯ 2 ಪ್ರತಿಗಳೊಂದಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ

Housing.com